


ಎಡದಿಂದ ಬಲಕ್ಕೆ :

1. ಮಹಾ ಗ್ರಂಥದ ಪ್ರತಿ ಅಧ್ಯಾಯದ ಗಾಢ ವ್ಯಾಸಂಗ (4)
3. ಕೋವಿ ತೋರಿದೊಡನೆ ಪರಿಸ್ಥಿತಿ ಅತಿರೇಕ ಮುಟ್ಟಿತು (3)
4. ಎಲ್ಲರನ್ನೂ ಕರೆತರುವ ಕರ್ತವ್ಯ ಹೊತ್ತಿರುವವ ಆ ವ್ಯಾಪಾರಿ (3)
6. ವರಕವಿಯನ್ನು ನೇರ ಕಂಡಂತೆ ಕನಸು (4)
7. ಹಳ್ಳ ತೆಗೆದಿಟ್ಟು ನಿರ್ಮಿಸಲಾದ ಭದ್ರ ಬುನಾದಿ (4)
9. ಯಾವ ಕಕ್ಷೆಯಲ್ಲಿದೆಯೋ ಏನೋ ' ದೇವತಾ ಪ್ರಪಂಚ ' (4)
12. ಕರಾಳ ದಂಧೆಗಳನ್ನು ನಡೆಸಿ ಗಳಿಸಿರುವುದೇ ಇಷ್ಟೂ 'ಕಪ್ಪು ಹಣ'(4)
14. ವಾಚನವನ್ನು ಕೇಳಬಂದು ಹಿಂದುಮುಂದು ನಿಂತ ಮೋಸಗಾರ (3)
15. ಕಿಂಚಿತ್ ಕೊಳಕು ಕಂಡರೂ ಅದೇ ಭಾರೀ ದೋಷವಾದೀತು (3)
16. ತುಂಗಾ ತೀರದಲ್ಲಿ ಒಣಗಿದ ಪರ್ಣ ಹೇಗೆ ? (4)

ಮೇಲಿಂದ ಕೆಳಕ್ಕೆ :

1. ಆಪ್ತರ ಕಾರ್ಯ ನಿರ್ವಹಿಸುವುದರಲ್ಲೂ ದ್ರೋಹವೇ ? (4)
2. ತವರಿನಿಂದ ತಂದದ್ದೆಲ್ಲ ಬರೀ ಬೆಣ್ಣೆ ಅಷ್ಟೇ (4)
3. ವಂದನೆ ಮಾಡಿ ನಂತರ ಮಾತನ್ನಾರಂಭಿಸುವುದೂ ಒಂದು ಕ್ರಮ (3)
5. ಹೊಲಕ್ಕೆ ಕಾಲಿಟ್ಟವರೊಡನೆ ಮಾತಿನಲ್ಲೇ ಭಾರೀ ಜಗಳ (3)
6. ಆ ಮನೆಯ ಪ್ರತಿ ಕೆಲಸವೂ ಎಷ್ಟು ಸುಂದರ! (4)
8. ದುಷ್ಟನ ಮನೆಯ ಬಾಗಿಲು ತಟ್ಟಲು ಭಾರೀ ಧೈರ್ಯ ಬೇಕು (4)
10. ಆ ದೃಶ್ಯ ಕಣ್ಣಿಗೆ ಕಾಣಿಸುವಂತಾದದ್ದು ಅತ್ಯಲ್ಪ ಸಮಯ (3)
11. ಕವಿಯಂತಲ್ಲ; ಲಲಿತ ವಿದ್ಯೆ ಕಲಿತವ (4)
12. ಕಟ್ಟಿಗೆಯಲ್ಲಿ ಆಕೃತಿಗಳನ್ನು ಕೆತ್ತುವುದು ಕಷ್ಟದ ಕುಶಲ ವಿದ್ಯೆ (4)
13. ಸದಾ ಕದನಕ್ಕೇ ಇಳಿದು ನಿಲ್ಲುತ್ತಾನೆ, ತುಂಬ ಹಣ ಇರುವವ (3)

## 04-5-2017ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಂಪಾದನೆ 3. ನಿರಭ್ರ 4. ರಕ್ಕಸಿ 6. ಮರಿಹಾವು 7. ದೇವಾಲಯ 9. ಅರವಿಂದ 11. ರುರಾಕತ (ತಕರಾರು ಹಿಂದುಮುಂದು) 13. ತರಗತಿ 15. ಅಭಿಮಾನಿ 17. ವ್ಯಸನ 18. ರಾಜಿಸು 19. ತಿಲತೈಲ

ಮೇಲಿಂದ ಕೆಳಕ್ಕೆ :

1. ಸಂಭ್ರಮ 2. ನೆರವು 3. ನಿರ್ಮಲ 5. ಸಿತಾರ 7. ದೇವದಾರು 8.ಯಥೋಚಿತ 9. ಅನಿಶ್ಚಿತ 10. ದಳಪತಿ 12. ಕರ್ತವ್ಯ 14. ರಮಿಸು 15. ಅನತಿ 16. ನಿರಾಳ

## ಪ್ರಶ್ನಾಂಕಣ

# ಪೆಂಗ್ವಿನ್: ಏನು ವಿಶೇಷ?

ಪೆಂಗ್ವಿನ್ ಅದೊಂದು ಹಕ್ಕಿ ; ಅದೊಂದು ಹಾರದ ಹಕ್ಕಿ. ಆದರೆ , ವಿಶೇಷ ಏನೆಂದರೆ, ಈ ಹಕ್ಕಿಯ ಎರಡೂ ರೆಕ್ಕೆಗಳು ಧೃಢವಾದ ಮತ್ತು ಬೀಸಬಹುದಾದ 'ಈಜು ರೆಕ್ಕೆ 'ಗಳಂತಿದ್ದು ಕಡಲಲ್ಲಿ ಸಮರ್ಥವಾಗಿ ವೇಗವಾಗಿ ಈಜಾಡಲು, ಮತ್ಸ್ಯಗಳನ್ನು ಬೇಟೆಯಾಡಲು ಬಹು ಸೂಕ್ತವಾಗಿವೆ. ಅಷ್ಟೇ ಅಲ್ಲದೆ, ಕಡಲ ತೀರದಲ್ಲಿ ಜಾಲಪಾದಗಳ ಮೇಲೆ ನಿಲ್ಲಲು, ಓಡಾಡಲು, ಹಿಮಹಾಸುಗಳ ಮೇಲೆ ಜಾರಿ ಸಾಗಲು ಕೂಡ ಈ ರೆಕ್ಕೆಗಳು ಸಹಕಾರಿಯಾಗುವಂತೆ ರಚನೆಗೊಂಡಿವೆ.

ಬದುಕಿಗಾಗಿ, ಆಹಾರಕ್ಕಾಗಿ ಕಡಲನ್ನೂ, ಮೊಟ್ಟೆ ಇಟ್ಟು ಮರಿ ಮಾಡಲು ಕಡಲ ತೀರವನ್ನೂ ಆಶ್ರಯಿಸಿರುವ ಪೆಂಗ್ವಿನ್ ಗಳ ವಾಸಕ್ಷೇತ್ರ ಧರೆಯ ದಕ್ಷಿಣ ಗೋಳಾರ್ಧಕ್ಕೆ ಸೀಮಿತವಾಗಿರುವುದು ಈ ಹಕ್ಕಿಗಳ ಮತ್ತೊಂದು ವಿಶೇಷ ( ಒಂದೇ ಒಂದು ಪ್ರಭೇದ ಮಾತ್ರ ಉತ್ತರ ಗೋಳಾರ್ಧದಲ್ಲಿದೆ ). ಸುಮಾರು ಎರಡುಮೂರು ಕೋಟಿ ವರ್ಷಗಳ ಹಿಂದಿನಿಂದ ಪೃಥ್ವಿಯಲ್ಲಿರುವ ಈ ಹಕ್ಕಿಗಳಲ್ಲಿ ಪ್ರಸ್ತುತ ಹದಿನೇಳು ಪ್ರಭೇದಗಳಿವೆ : " ಕಿಂಗ್ ಪೆಂಗ್ವಿನ್ ( ಚಿತ್ರ 1 ), ಎಂಪರರ್ ಪೆಂಗ್ವಿನ್ ( ಚಿತ್ರ 2 ), ಜೆಂಟೂ ಪೆಂಗ್ವಿನ್, ಚಿನ್ ಸ್ಟ್ರಾಪ್ ಪೆಂಗ್ವಿನ್, ಲಿಟ್ಲ್ ಪೆಂಗ್ವಿನ್ ... ಇತ್ಯಾದಿ ". ಈಗಿರುವ ಇಷ್ಟೂ ಪ್ರಭೇದಗಳಲ್ಲಿ ಎಂಪರರ್ ಪೆಂಗ್ವಿನ್ ನದೇ ಅತ್ಯಂತ ಬೃಹದ್ಗಾತ್ರ. ಅದು ನಾಲ್ಕು ಅಡಿ ಎತ್ತರಕ್ಕೆ ಬೆಳೆಯುತ್ತದೆ ; ನಲವತ್ತೈದು ಕಿಲೋ ತೂಕ ಮುಟ್ಟುತ್ತದೆ ! ಅತ್ಯಂತ ಚಿಕ್ಕ ಗಾತ್ರದ್ದು' ಲಿಟ್ಲ್ ಪೆಂಗ್ವಿನ್' ಪ್ರಭೇದ. ಅದರದು ಗರಿಷ್ಠ ಒಂದೂಕಾಲು ಅಡಿ ಎತ್ತರ; ಒಂದೂವರೆ ಕಿಲೋ ತೂಕ ! ಪೆಂಗ್ವಿನ್ ಗಳ ಪರಮ ದೈತ್ಯ ಪ್ರಾಚೀನ ಪ್ರಭೇದದೊಡನೆ ಈಗಿನ ಎಂಪರರ್ ಮತ್ತು ಲಿಟ್ಲ್ ಪೆಂಗ್ವಿನ್ ಗಳ ಗಾತ್ರಗಳ ಹೋಲಿಕೆಯನ್ನು ಚಿತ್ರ3 ರಲ್ಲಿ ಗಮನಿಸಿ. ಪೆಂಗ್ವಿನ್ ಗಳ ಜೀವಿತಾವಧಿ ಹದಿನೈದರಿಂದ ಇಪ್ಪತ್ತು ವರ್ಷ.

ಕಡಲಲ್ಲಿರುವಾಗ ಪೆಂಗ್ವಿನ್ ಗಳು ಸ್ವತಂತ್ರವಾಗಿ, ಪ್ರತ್ಯೇಕವಾಗಿ ಬದುಕುತ್ತವಾದರೂ, ಸಂತಾನ ವರ್ಧನಾ ಕಾಲದಲ್ಲಿ ಅವು ಗುಂಪು




ಗುಂಪಾಗಿ, ಒಂದೇ ಕಾಲದಲ್ಲಿ ನಿರ್ದಿಷ್ಟ ಸಾಗರತೀರ ಪ್ರದೇಶಗಳಿಗೇ ಬರುತ್ತವೆ; ಮೊಟ್ಟೆ ಇಟ್ಟು, ಗಂಡುಹೆಣ್ಣುಗಳೆರಡೂ ಕಾವಲು ನಿಂತು, ಕಾವು ಕೊಟ್ಟು, ಮರಿ ಮಾಡಿ, ಅವು ಪ್ರೌಢವಾದೊಡನೆ ಕಡಲಿಗೆ ಹಿಂದಿರುಗುತ್ತವೆ. ಇಂತಹ ಪ್ರತಿ ಪೆಂಗ್ವಿನ್ ಗುಂಪಿನ ' ಜನ ಸಂಖ್ಯೆ ' ನೂರಾರರಿಂದ ಸಾವಿರಾರರವರಗೆ ಇರುತ್ತದಾದರೂ ವಿಶೇಷವಾಗಿ ಎಂಪರರ್ ಮತ್ತು ಕಿಂಗ್ ಪೆಂಗ್ವಿನ್ ಗಳು ಅಂಟಾರ್ಕ್ಟಿಕಾ ಮತ್ತು ಅದರ ಸನಿಹದ ನೆಲೆಗಳಲ್ಲಿ, ಅಲ್ಲಿನ ಶಾಶ್ವತ ಹಿಮಾವೃತ ಬಯಲುಗಳಲ್ಲಿ, ಮಿಲಿಯಾಂತರ ಸಂಖ್ಯೆಗಳಲ್ಲಿ ಗುಂಪುಗೂಡಿ ' ಸಂತಾನ ಜಾತ್ರೆ ' ನಡೆಸುತ್ತವೆ ( ಚಿತ್ರ 1, 2 ) ; ಅಂಟಾರ್ಕ್ಟಿಕಾದ ಮಬ್ಬುಗತ್ತಲಿನ, ಗರಿಷ್ಠ ಚಳಿಯ ಪರಿಸರದಲ್ಲೂ ಬೆಚ್ಚಗೆ ನೆಮ್ಮದಿಯಾಗಿರಬಲ್ಲ ಸಾಮರ್ಥ್ಯ ಅವಕ್ಕಿದೆ !

ಪೆಂಗ್ವಿನ್ ಗಳ ಈ ಸಂತಾನ ಸಂತೆಯ ದೃಶ್ಯ ನೇರ ನೋಡಿದರೂ ನಂಬಲಾಗದಂತಹ ಅಸದೃಶ, ಅತ್ಯದ್ಭುತ ನಿಸರ್ಗ ಸೋಜಿಗ ! ಅದೇ ಅವುಗಳ ಪರಮ ವಿಶೇಷ.

■ ಎನ್. ವಾಸುದೇವ್